CC

# 2006

## GENERAL STUDIES

### Paper 1

*Time : 3 Hours ]* *[ Maximum Marks : 300*

---

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions from all Parts.*

*The number of marks carried by each question is indicated with the question.*

*The length of the answers should not, as far as possible, exceed the specification given for the question.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

https://www.freshersnow.com/previous-year-question-papers/

## PART A

**1.** Answer any ***two*** of the following questions in not more than 200 – 250 words each : *20×2=40*

(a) Discuss the statement that the British conquered India "in a fit of absent-mindedness".

(b) Comment on the view that modern Indian nationalism was the expression of the aspirations and frustrations of the emergent middle class.

(c) Point out the contributions of Sir M. Visweshvaraiah to the modernization of Mysore.

(d) Trace the stages in the unification of Karnataka.

**2.** Answer any ***four*** of the following questions in about 100 – 120 words each : *10×4=40*

(a) Summarize the arguments of the "Drain theory".

(b) Was Chauri Chaura reason enough for the suspension of the Non-Cooperation Movement ?

(c) How Gandhian was the 'Quit India' Movement ?

(d) Bring out the peasant content in the Nagar Rebellion.

(e) Can the work of Tipu Sultan be described as "confronting colonialism" ?

(f) Highlight the work of Dr. Shivarama Karanth in popularizing science.

**3.** Answer any ***two*** of the following questions in about 50 – 60 words each : *5×2=10*

(a) Write a note on the contributions of Mrs. Annie Besant to the Home Rule Movement.

(b) Why did the Congress ministries resign in 1939 ?

(c) Outline the impact of the Indian National Congress in the Hyderabad-Karnataka region during the Freedom Struggle.

https://www.freshersnow.com/previous-year-question-papers/

## ಭಾಗ A

**1.** ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ತಲಾ 200 ರಿಂದ 250 ಪದಗಳಿಗೆ ಮೀರದಂತೆ ಉತ್ತರಿಸಿ. *20×2=40*

(a) "ಬ್ರಿಟಿಷರು ಭಾರತವನ್ನು ಅನ್ಯಮನಸ್ಕತೆಯಿಂದಲೇ ಗೆದ್ದುಕೊಂಡರು" ಎಂಬ ಹೇಳಿಕೆಯನ್ನು ಚರ್ಚಿಸಿ.

(b) ಆಧುನಿಕ ಭಾರತದ ರಾಷ್ಟ್ರೀಯವಾದವು ಆಗಷ್ಟೇ ಉಗಮಿಸುತ್ತಿದ್ದ ಮಧ್ಯಮ ವರ್ಗದ ಆಕಾಂಕ್ಷೆಗಳು ಹಾಗೂ ಹತಾಶೆಗಳ ಅಭಿವ್ಯಕ್ತಿಯಾಗಿತ್ತು ಎಂಬ ದೃಷ್ಟಿಕೋನದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

(c) ಮೈಸೂರು ರಾಜ್ಯದ ಆಧುನಿಕೀಕರಣಕ್ಕೆ ಸರ್ ಎಮ್. ವಿಶ್ವೇಶ್ವರಯ್ಯನವರು ನೀಡಿದ ಕೊಡುಗೆ ಕುರಿತು ಬರೆಯಿರಿ.

(d) ಕರ್ನಾಟಕದ ಏಕೀಕರಣದ ಹಂತಗಳನ್ನು ತಿಳಿಸಿ.

**2.** ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ ಸುಮಾರು 100 - 120 ಪದಗಳಷ್ಟಿರಬೇಕು : *10×4=40*

(a) "ಸೋರಿಕೆ ಸಿದ್ಧಾಂತ"ವು ಮಂಡಿಸಿದ ವಾದಗಳ ಸಾರಾಂಶವನ್ನು ಬರೆಯಿರಿ.

(b) ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಳ್ಳುವುದಕ್ಕೆ ಚೌರಿಚೌರಾ ಘಟನೆಯ ಕಾರಣವೊಂದೇ ಸಾಕಾಯಿತೆ ?

(c) 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಗಾಂಧಿಯ ತತ್ವ ಸಿದ್ಧಾಂತದ ಅಂಶ ಎಷ್ಟಿದ್ದಿತು ?

(d) ನಗಾರ್ ದಂಗೆಯಲ್ಲಿ ರೈತ ಸಂಬಂಧಿ ಅಂಶವನ್ನು ವಿವರಿಸಿ.

(e) ಟಿಪ್ಪೂ ಸುಲ್ತಾನನ ಕಾರ್ಯವನ್ನು ವಸಾಹತುಶಾಹಿಯ ವಿರುದ್ಧ ನಡೆದ ಹೋರಾಟ ಎಂದು ವಿವರಿಸಬಹುದೆ ?

(f) ವಿಜ್ಞಾನವನ್ನು ಜನಪ್ರಿಯಗೊಳಿಸುವಲ್ಲಿ ಡಾ. ಶಿವರಾಮ ಕಾರಂತರು ಮಾಡಿದ ಕೆಲಸದ ಮಹತ್ವವನ್ನು ತಿಳಿಸಿ.

**3.** ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ತಲಾ 50 – 60 ಪದಗಳಿಗೆ ಮೀರದಂತೆ ಉತ್ತರಿಸಿ : *5×2=10*

(a) 'ಹೋಂ ರೂಲ್' ಚಳುವಳಿಗೆ ಶ್ರೀಮತಿ ಆ್ಯನಿ ಬೆಸೆಂಟ್ ಅವರು ನೀಡಿದ ಕೊಡುಗೆ ಕುರಿತು ಬರೆಯಿರಿ.

(b) 1939 ರಲ್ಲಿ ಕಾಂಗ್ರೆಸ್ ಸಚಿವರ (Congress Ministries) ರಾಜೀನಾಮೆಗೆ ಕಾರಣವೇನು ?

(c) ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದ ಮೇಲೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಬೀರಿದ ಪ್ರಭಾವವನ್ನು ವಿವರಿಸಿ.

[Turn over

https://www.freshersnow.com/previous-year-question-papers/

**4.** Write brief notes on ***all*** of the following in about 20 – 25 words each : *2×5=10*

(a) The 'Black Hole' of Calcutta

(b) Gandhi-Irwin Pact

(c) Aihole

(d) The element of social protest in *Bhutārādhane*

(e) Field Marshal K.M. Cariappa

https://www.freshersnow.com/previous-year-question-papers/

4. ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ತಲಾ 20 ರಿಂದ 25 ಪದಗಳಿಗೆ ಮೀರದಂತೆ ಟಿಪ್ಪಣಿ ಬರೆಯಿರಿ : $2 \times 5 = 10$

(a) ಕಲ್ಕತ್ತಾದ 'ಬ್ಲಾಕ್ ಹೋಲ್'

(b) ಗಾಂಧಿ-ಇರ್ವಿನ್ ಒಪ್ಪಂದ

(c) ಐಹೊಳೆ

(d) ಭೂತಾರಾಧನೆಯಲ್ಲಿ ವ್ಯಕ್ತವಾಗುವ ಸಾಮಾಜಿಕ ಪ್ರತಿಘಟನೆ

(e) ಫೀಲ್ಡ್ ಮಾರ್ಷಲ್ ಕೆ.ಎಂ. ಕರಿಯಪ್ಪ

https://www.freshersnow.com/previous-year-question-papers/

## PART B

5. Answer any ***three*** of the following questions in about 200 – 250 words each : *20×3=60*

(a) Discuss the contradiction between development and conservation of nature. What position would you take if the option were either one or the other ? Defend your answer.

(b) Bring out the details of the nuclear deal between India and the United States of America. Is it in accordance with India's Non-Aligned foreign policy ?

(c) Highlight the impact that the resurgent Chinese economy has had in reshaping inter-state relations in Asia.

(d) Give a schematic account of the categories for reservation employed by the Havanur, Venkataswamy and Chinnappa Reddy Commissions for the socially and economically backward classes.

(e) Examine the major problems faced by the Karnataka film industry in recent years.

(f) Do you think that poverty and unemployment are inter-related problems ? If so, how have our national economic planners been attempting to alleviate poverty through employment generation programmes since 2002 – 03 ?

(g) Examine the Micro-credit system introduced by Muhammed Yunus.

6. Answer any ***six*** of the following questions in about 100 – 120 words each : *10×6=60*

(a) Highlight the salient features of the anti-monarchical and democratic movement in Nepal in the last two years.

https://www.freshersnow.com/previous-year-question-papers/

## ಭಾಗ B

**5.** ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 200 ರಿಂದ 250 ಪದಗಳಿಗೆ ಮೀರದಂತಿರಬೇಕು : *20×3=60*

(a) ಅಭಿವೃದ್ಧಿ ಮತ್ತು ಪ್ರಕೃತಿಯ ಸಂರಕ್ಷಣೆ - ಇವೆರಡರ ನಡುವಿನ ವಿರೋಧಾಭಾಸ ಕುರಿತು ಚರ್ಚಿಸಿ. ಇವೆರಡರಲ್ಲಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳುವುದಾದಲ್ಲಿ ಯಾವುದನ್ನು ಆಯ್ಕೆಮಾಡುತ್ತೀರಿ ? ಅದಕ್ಕೆ ಕಾರಣವನ್ನು ಸಮರ್ಥಿಸಿ.

(b) ಭಾರತ ಮತ್ತು ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ನಡುವಿನ ಪರಮಾಣು ವ್ಯವಹಾರದ ವಿವರಗಳನ್ನು ನಿರೂಪಿಸಿ. ಇದು ಭಾರತದ ಅಲಿಪ್ತ ವಿದೇಶಾಂಗ ನೀತಿಗೆ ಅನುಗುಣವಾಗಿದೆಯೆ ?

(c) ಏಷಿಯಾದಲ್ಲಿ ಅಂತರ್ ದೇಶ ಸಂಬಂಧಗಳನ್ನು ಪುನರ್ರೂಪಿಸುವಲ್ಲಿ ಚೀನಾದ ಪುನರುಜ್ಜೀವಿತ ಅರ್ಥವ್ಯವಸ್ಥೆಯು ಬೀರಿದ ಪ್ರಭಾವನ್ನು ತಿಳಿಸಿ.

(d) ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ ಹಾವನೂರು, ವೆಂಕಟಸ್ವಾಮಿ ಹಾಗೂ ಚಿನ್ನಪ್ಪ ರೆಡ್ಡಿ ಆಯೋಗಗಳು ಅಳವಡಿಸಿಕೊಂಡ ಪ್ರವರ್ಗಗಳ ವಿಂಗಡಣಾ ಯೋಜನೆಯನ್ನು ಪರಿಚಯಿಸಿ.

(e) ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಚಲನಚಿತ್ರೋದ್ಯಮವು ವಿದುರಿಸಬೇಕಾಗಿಬಂದ ಪ್ರಮುಖ ಸಮಸ್ಯೆಗಳನ್ನು ಪರಿಶೀಲಿಸಿ.

(f) ಬಡತನ ಮತ್ತು ನಿರುದ್ಯೋಗ ಪರಸ್ಪರ ಸಂಬಂಧಿಸಿದ ಸಮಸ್ಯೆಗಳು ಎಂದು ಭಾವಿಸುತ್ತೀರಾ ? ಹಾಗಿದ್ದಲ್ಲಿ, ಬಡತನವನ್ನು ತೊಡೆಹುದಾಕುವುದಕ್ಕಾಗಿ ನಮ್ಮ ರಾಷ್ಟ್ರೀಯ ಆರ್ಥಿಕ ಯೋಜನಾಕಾರರು 2002 – 03 ರಿಂದಲೂ ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳ ಮೂಲಕ ಯಾವ ರೀತಿ ಪ್ರಯತ್ನಿಸುತ್ತಿದ್ದಾರೆ ?

(g) ಮೊಹಮ್ಮದ್ ಯೂನಸ್ ಅವರು ಆರಂಭಿಸಿದ ಕಿರುಸಾಲ ಪದ್ಧತಿಯನ್ನು ಪರಿಶೀಲಿಸಿ.

**6.** ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 100 ರಿಂದ 120 ಪದಗಳ ಮಿತಿಯಲ್ಲಿರಬೇಕು : *10×6=60*

(a) ಕಳೆದ ಎರಡು ವರ್ಷಗಳಲ್ಲಿ ನೇಪಾಳದಲ್ಲಿ ನಡೆದ ರಾಜಪ್ರಭುತ್ವ ವಿರೋಧಿ ಹಾಗೂ ಪ್ರಜಾ ಪ್ರಭುತ್ವವಾದೀ ಚಳುವಳಿಗಳ ವಿಶಿಷ್ಟ ಸ್ವರೂಪದ ಮುಖ್ಯಾಂಶಗಳನ್ನು ತಿಳಿಸಿ.

[Turn over

https://www.freshersnow.com/previous-year-question-papers/

(b) How has the United States of America reacted to the nuclear programme of North Korea ?

(c) Mention the main provisions of the RTI Act.

(d) Discuss the implications of the proposed Greater Bangalore Authority for solving infrastructure-related problems.

(e) Highlight the major policy measures initiated by Karnataka to retain children aged 6 – 14 years in school.

(f) What are the measures taken by the Government of Karnataka to rectify regional imbalances ?

(g) Analyse the main sources and problems of non-institutional sources of credit to the Agricultural sector.

(h) Discuss the recommendations of the Mahajan Commission regarding the boundary dispute between Karnataka and Maharashtra.

(i) Assess the contribution of the corporate sector to the promotion of sports in India.

(j) Our urban complexes are not equipped to face natural disasters. — Do you agree ? Illustrate your answer with the recent flooding of Mumbai city.

**7.** Answer any ***four*** of the following questions in about 50 – 60 words each : *5×4=20*

(a) Justify India's claims to a seat in the Security Council.

(b) What are the main aspects of the Common Minimum Programme of the UPA Government ?

(c) Highlight the main provisions of the award of Cauvery waters by the Tribunal in 2006.

(d) Account for the success of the Indian Railways in recent months.

(e) Discuss Wind as a non-conventional source of energy in Karnataka.

(f) Explain the importance of gender-budgeting for Karnataka state.

https://www.freshersnow.com/previous-year-question-papers/

(b) ಅಮೆರಿಕಾದ ಸಂಯುಕ್ತ ಸಂಸ್ಥಾನಗಳು ಉತ್ತರ ಕೊರಿಯಾ ನಡೆಸಿದ ಪರಮಾಣು ಕಾರ್ಯಕ್ರಮಗಳಿಗೆ ಯಾವ ರೀತಿ ಪ್ರತಿಕ್ರಿಯಿಸಿದೆ ?

(c) RTI ಕಾಯಿದೆಯ ಮುಖ್ಯ ಉಪಬಂಧಗಳನ್ನು ತಿಳಿಸಿ.

(d) ಮೂಲ ಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಪ್ರಸ್ತಾಪಿಸಲಾಗಿರುವ ಬೃಹತ್ ಬಂಗಳೂರು ಪ್ರಾಧಿಕಾರದಿಂದ ಆಗಲಿರುವ ಪರಿಣಾಮಗಳನ್ನು ಕುರಿತು ಚರ್ಚಿಸಿ.

(e) 6 – 14 ವಯಸ್ಸಿನ ಮಕ್ಕಳು ಶಾಲೆ ಬಿಡದಂತೆ ಮಾಡುವುದಕ್ಕಾಗಿ ಕರ್ನಾಟಕ ರಾಜ್ಯವು ಜಾರಿಗೊಳಿಸಿದ ಪ್ರಮುಖ ನೀತಿಕ್ರಮಗಳು ಯಾವುವು ?

(f) ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವುದಕ್ಕಾಗಿ ಕರ್ನಾಟಕ ಸರ್ಕಾರವು ಏನೇನು ಕ್ರಮಗಳನ್ನು ಕೈಗೊಂಡಿದೆ ?

(g) ಕೃಷಿಕ್ಷೇತ್ರಕ್ಕೆ ಸಾಂಸ್ಥಿಕವಲ್ಲದ ಮೂಲಗಳಿಂದ ಸಾಲ ಒದಗಿಸುವ ಮುಖ್ಯ ಆಕರಗಳು ಯಾವುವು ಮತ್ತು ಅವುಗಳ ಸಮಸ್ಯೆಗಳೇನು ಎಂಬುದನ್ನು ವಿಶ್ಲೇಷಿಸಿ.

(h) ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿವಿವಾದಕ್ಕೆ ಸಂಬಂಧಿಸಿದಂತೆ ಮಹಾಜನ್ ಆಯೋಗವು, ನೀಡಿದ ಶಿಫಾರಸುಗಳನ್ನು ಕುರಿತು ಚರ್ಚಿಸಿ.

(i) ಭಾರತದಲ್ಲಿ ಕ್ರೀಡೆಗಳ ಪ್ರವರ್ಧನೆಗಾಗಿ ಕಾರ್ಪೊರೇಟ್ ವಲಯದ ಕೊಡುಗೆಯ ಮೌಲ್ಯಮಾಪನ ಮಾಡಿ.

(j) ನಮ್ಮ ನಗರಗಳ ಸಮುಚ್ಚಯಗಳು ಪ್ರಾಕೃತಿಕ ವಿಕೋಪಗಳನ್ನು ಎದುರಿಸುವುದಕ್ಕೆ ತಕ್ಕಂತೆ ಸಜ್ಜುಗೊಂಡಿಲ್ಲ. ಮುಂಬೈ ನಗರದ ಇತ್ತೀಚಿನ ಪ್ರವಾಹದ ಹಾವಳಿಯನ್ನು ಗಮನದಲ್ಲಿಟ್ಟುಕೊಂಡು ಉತ್ತರ ಬರೆಯಿರಿ.

**7.** ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಉತ್ತರಗಳು ತಲಾ 50 – 60 ಪದಗಳ ಮಿತಿಯಲ್ಲಿರಬೇಕು : *5×4=20*

(a) ಭದ್ರತಾ ಮಂಡಳಿಯಲ್ಲಿ ಸ್ಥಾನ ಪಡೆಯಲು ಭಾರತ ಮಾಡುತ್ತಿರುವ ಅಹವಾಲುಗಳನ್ನು ಸಮರ್ಥಿಸಿ.

(b) ಯು.ಪಿ.ಎ. ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮುಖ್ಯ ಅಂಶಗಳು ಯಾವುವು ?

(c) 2006 ರಲ್ಲಿ ನ್ಯಾಯಮಂಡಳಿಯು ಕಾವೇರಿ ನೀರಿಗೆ ಸಂಬಂಧಿಸಿದಂತೆ ನೀಡಿದ ನ್ಯಾಯ ನಿರ್ಣಯದ ಮುಖ್ಯ ಅಂಶಗಳನ್ನು ತಿಳಿಸಿ.

(d) ಇತ್ತೀಚಿನ ತಿಂಗಳುಗಳಲ್ಲಿ ಭಾರತೀಯ ರೈಲ್ವೇ ಸಾಧಿಸಿರುವ ಯಶಸ್ಸಿಗೆ ಕಾರಣಗಳೇನು ?

(e) ಕರ್ನಾಟಕದಲ್ಲಿ ಸಾಂಪ್ರದಾಯಿಕವಲ್ಲದ ಶಕ್ತಿ ಮೂಲವಾಗಿ ಗಾಳಿಯ ಬಳಕೆ ಬಗ್ಗೆ ಚರ್ಚಿಸಿ.

(f) ಕರ್ನಾಟಕ ರಾಜ್ಯದ ಲಿಂಗಾಧಾರಿತ ಬಜೆಟ್ ರಚನೆಯ ಪ್ರಾಮುಖ್ಯತೆಯನ್ನು ವಿವರಿಸಿ.

https://www.freshersnow.com/previous-year-question-papers/

**8.** Write brief notes on ***all*** of the following in about 20 – 25 words each : *2×10=20*

(a) Ball tampering

(b) Amitabh Bachchan

(c) "Gandhigiri"

(d) The Koragas

(e) Datta Peetha tradition

(f) Lashkar-e-Taiba

(g) Magsaysay Award

(h) Michael Schumacher

(i) Kiran Desai's Booker Prize winning novel

(j) Minimum Support Price

https://www.freshersnow.com/previous-year-question-papers/

**8.** ಈ ಕೆಳಗಿನವುಗಳಿಗೆ ಎಲ್ಲಕ್ಕೂ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಉತ್ತರ 20 – 25 ಪದಗಳ ಮಿತಿಯಲ್ಲಿರಬೇಕು : *2×10=20*

(a) ಚೆಂಡನ್ನು ವಿರೂಪಗೊಳಿಸುವುದು

(b) ಅಮಿತಾಭ್ ಬಚನ್

(c) "ಗಾಂಧಿಗಿರಿ"

(d) ಕೊರಗರು

(e) ದತ್ತಪೀಠ ಸಂಪ್ರದಾಯ

(f) ಲಷ್ಕರ್-ಎ-ತೋಯ್ಬಾ

(g) ಮ್ಯಾಗ್‌ಸೇಸೇ ಪ್ರಶಸ್ತಿ

(h) ಮೈಖೆಲ್ ಷುಮ್ಯಾಕರ್

(i) ಬುಕರ್ ಬಹುಮಾನ ಗಳಿಸಿದ ಕಿರಣ್ ದೇಸಾಯಿ ಅವರ ಕಾದಂಬರಿ

(j) ಕನಿಷ್ಠ ಬೆಂಬಲ ಬೆಲೆ

[Turn over

https://www.freshersnow.com/previous-year-question-papers/

## PART C

**9.** (a) State whether the following statements are true or false. Justify your answer : *6*

(i) Smitha travels from Bangalore to Hassan at a speed of 40 kmph and returns at a speed of 60 kmph. The average speed during the entire trip is 50 kmph.

(ii) In a locality with outbreak of cholera, 60% of the inhabitants were attacked while 70% had been inoculated. The minimum percentage of persons who were inoculated but attacked is 10.

(iii) The salary of a person is first increased by 20% and then decreased by 5%. The net increase in salary is 15%.

(b) The table given below shows the distribution of the life-time of 400 electric tubes :

| Life-time (hours) | No. of tubes |
|---|---|
| 300 – 399 | 14 |
| 400 – 499 | 46 |
| 500 – 599 | 58 |
| 600 – 699 | 76 |
| 700 – 799 | 68 |
| 800 – 899 | 62 |
| 900 – 999 | 48 |
| 1000 – 1099 | 22 |
| 1100 – 1199 | 6 |

Find the percentage of tubes whose life-time is *8*

(i) at the most 599 hours.

(ii) at least 600 hours but not more than 999 hours.

(iii) less than 700 hours or more than 1099 hours.

(iv) more than 1200 hours.

https://www.freshersnow.com/previous-year-question-papers/

## ಭಾಗ C

**9.** (a) ಕೆಳಗಿನ ವಿವರಣೆಗಳು ಸರಿಯೋ, ತಪ್ಪೋ ತಿಳಿಸಿ. ನಿಮ್ಮ ಉತ್ತರಕ್ಕೆ ಕಾರಣ ನೀಡಿ : *6*

(i) ಸ್ಮಿತಾ ಎಂಬ ಹುಡುಗಿ ಬೆಂಗಳೂರಿನಿಂದ ಹಾಸನಕ್ಕೆ ಪ್ರತಿ ಗಂಟೆಗೆ 40 ಕಿ.ಮೀ. ವೇಗದಲ್ಲಿ ಪ್ರಯಾಣಿಸುತ್ತಾಳೆ ಮತ್ತು ಪ್ರತಿ ಗಂಟೆಗೆ 60 ಕಿ.ಮೀ. ವೇಗದಲ್ಲಿ ಹಿಂದಿರುಗುತ್ತಾಳೆ. ಇಡೀ ಪ್ರಯಾಣದ ಸರಾಸರಿ ವೇಗವು ಪ್ರತಿ ಗಂಟೆಗೆ 50 ಕಿ.ಮೀ.

(ii) ಕಾಲರಾ ತಲೆದೋರಿದ ಒಂದು ಸ್ಥಳದಲ್ಲಿ ಅಲ್ಲಿನ 60% ನಿವಾಸಿಗಳು ರೋಗಕ್ಕೆ ತುತ್ತಾಗುತ್ತಾರೆ. 70% ಜನರಿಗೆ ನಿರೋಧಕ ಚುಚ್ಚುಮದ್ದು ನೀಡಲಾಗಿದೆ. ನಿರೋಧಕ ಚುಚ್ಚುಮದ್ದು ನೀಡಿಯೂ ರೋಗಕ್ಕೆ ತುತ್ತಾದವರ ಕನಿಷ್ಠ ಶೇಕಡಾವಾರು 10.

(iii) ಒಬ್ಬ ವ್ಯಕ್ತಿಯ ವೇತನವನ್ನು ಆರಂಭದಲ್ಲಿ 20% ರಷ್ಟು ಹೆಚ್ಚಿಸಿ, ಅನಂತರ 5% ರಷ್ಟು ಇಳಿಸಲಾಗುತ್ತದೆ. ಅತನ ವೇತನದಲ್ಲಾದ ನಿವ್ವಳ ಹೆಚ್ಚಳ 15%.

(b) ಕೆಳಗೆ ಕೊಟ್ಟಿರುವ ಕೋಷ್ಟಕವು 400 ವಿದ್ಯುತ್ ಕೊಳವೆದೀಪಗಳ ಬಾಳಿಕೆಯ ಕಾಲದ ವಿತರಣೆಯನ್ನು ತೋರಿಸುತ್ತದೆ :

| ಬಳಕೆಯ ಕಾಲ (ಗಂಟೆಗಳಲ್ಲಿ) | ಕೊಳವೆದೀಪಗಳ ಸಂಖ್ಯೆ |
|---|---|
| 300 – 399 | 14 |
| 400 – 499 | 46 |
| 500 – 599 | 58 |
| 600 – 699 | 76 |
| 700 – 799 | 68 |
| 800 – 899 | 62 |
| 900 – 999 | 48 |
| 1000 – 1099 | 22 |
| 1100 – 1199 | 6 |

ಕೆಳಕಂಡ ಬಾಳಿಕೆಯ ಕಾಲವಿರುವ ಕೊಳವೆದೀಪಗಳ ಶೇಕಡಾವಾರನ್ನು ಕಂಡುಹಿಡಿಯಿರಿ : *8*

(i) 599 ಗಂಟೆಗಳಷ್ಟು ಬಾಳಿಕೆ ಕಾಲ

(ii) ಕನಿಷ್ಠ 600 ಗಂಟೆ ಆದರೆ 999 ಗಂಟೆಗೆ ಹೆಚ್ಚಿಲ್ಲದ ಬಾಳಿಕೆ ಕಾಲ

(iii) 700 ಗಂಟೆಗಳಿಗಿಂತ ಕಡಿಮೆ ಅಥವಾ 1099 ಗಂಟೆಗಳಿಗಿಂತ ಹೆಚ್ಚು ಬಾಳಿಕೆ ಕಾಲ

(iv) 1200 ಗಂಟೆಗಳಿಗಿಂತ ಹೆಚ್ಚು ಬಾಳಿಕೆ ಕಾಲ

https://www.freshersnow.com/previous-year-question-papers/

(c) Distinguish between :

(i) Bar diagram and Histogram

(ii) Scatter diagram and Ogive curve

State how these diagrams are useful in data analysis. *6*

**10.** (a) Illustrate, by a suitable diagram, the following data on the expenditure of a typical middle class household : *8*

| Item | Percentage of Total Expenditure |
|---|---|
| Food | 50 |
| Clothing | 15 |
| Housing | 15 |
| Fuel and Light | 7 |
| Education | 8 |
| Miscellaneous | 5 |

(b) In the set-up of (a) given above, find out the actual expenditures, if the total expenditure is Rs. 12,000. *2*

(c) The following values of related variables x and y are given :

| | | | | | |
|---|---|---|---|---|---|
| x : | 4 | 10 | 12 | 14 | 20 |
| y : | 6 | 16 | 40 | 42 | 46 |

(i) Compute Pearson Correlation Coefficient r and $100r^2$.

(ii) Interpret statistically the values obtained in (i).

(iii) If every value of x is doubled, what will be the new value of r ? Give reasons. *10*

https://www.freshersnow.com/previous-year-question-papers/

(c) ಕೆಳಗಿನವುಗಳ ವ್ಯತ್ಯಾಸವನ್ನು ತಿಳಿಸಿ :

(i) ಕಂಬಿ ರೇಖಾಕೃತಿ ಮತ್ತು ಹಿಸ್ಟೊಗ್ರಾಂ

(ii) ಚೆದುರು ರೇಖಾಕೃತಿ ಮತ್ತು ಒಗೀವ್ ವಕ್ರ

ದತ್ತಾಂಶ ವಿಶ್ಲೇಷಣೆಗೆ ಈ ರೇಖಾಕೃತಿಗಳು ಹೇಗೆ ಸಹಾಯಕ ಎಂಬುದನ್ನು ತಿಳಿಸಿ. 6

**10.** (a) ಒಂದು ಸಾಮಾನ್ಯ ಮಧ್ಯಮ ವರ್ಗ ಕುಟುಂಬದ ಖರ್ಚುವೆಚ್ಚಗಳಿಗೆ ಸಂಬಂಧಿಸಿದ ಕೆಳಕಂಡ ದತ್ತಾಂಶವನ್ನು ಸೂಕ್ತ ರೇಖಾಕೃತಿಯೊಂದಿಗೆ ನಿರೂಪಿಸಿ : 8

| ಬಾಬ್ತು | ಒಟ್ಟು ಖರ್ಚುವೆಚ್ಚದ ಶೇಕಡಾವಾರು |
|---|---|
| ಆಹಾರ | 50 |
| ಬಟ್ಟೆ | 15 |
| ಮನೆ | 15 |
| ಇಂಧನ ಮತ್ತು ವಿದ್ಯುತ್‌ದೀಪ | 7 |
| ಶಿಕ್ಷಣ | 8 |
| ಇತರೆ | 5 |

(b) ಮೇಲೆ ಕೊಟ್ಟಿರುವ (a) ವ್ಯವಸ್ಥೆಯಲ್ಲಿ, ಒಟ್ಟು ಖರ್ಚುವೆಚ್ಚ 10,000 ರೂ. ಆಗಿದ್ದರೆ, ವಾಸ್ತವ ಖರ್ಚುವೆಚ್ಚ ಎಷ್ಟು ಎಂಬುದನ್ನು ಕಂಡುಹಿಡಿಯಿರಿ. 2

(c) ಸಂಬಂಧಿತ ಚರಾಂಶಗಳಾದ x ಮತ್ತು y ಗಳ ಮೌಲ್ಯಗಳನ್ನು ಕೆಳಗೆ ಕೊಡಲಾಗಿದೆ :

| | | | | | |
|---|---|---|---|---|---|
| x : | 4 | 10 | 12 | 14 | 20 |
| y : | 6 | 16 | 40 | 42 | 46 |

(i) ಪಿಯರ್‌ಸನ್ ಸಹಸಂಬಂಧ ಗುಣಾಂಕ r ಮತ್ತು $100r^2$ ಅನ್ನು ಲೆಕ್ಕಹಾಕಿ.

(ii) (i) ನಲ್ಲಿ ಪಡೆದ ಮೌಲ್ಯಗಳನ್ನು ಸಾಂಖ್ಯಿಕವಾಗಿ ವ್ಯಾಖ್ಯಾನಿಸಿ.

(iii) x ನ ಪ್ರತಿಯೊಂದು ಮೌಲ್ಯವನ್ನು ದ್ವಿಗುಣಗೊಳಿಸಿದರೆ r ನ ಹೊಸ ಮೌಲ್ಯವೇನು ? ಕಾರಣಗಳನ್ನು ತಿಳಿಸಿ. 10

[Turn over

https://www.freshersnow.com/previous-year-question-papers/

DD

# 2006

## GENERAL STUDIES

### Paper 2

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions from all Parts.*

*The number of marks carried by each question is indicated with the question.*

*The length of the answers should not, as far as possible, exceed the specification given for the question.*

SEAL

---

ವಿಶೇಷ ಸೂಚನ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

https://www.freshersnow.com/previous-year-question-papers/

## PART A

**1.** Answer any ***one*** of the following questions. Restrict your answer to 200 – 250 words each : *20×1=20*

(a) Discuss the causes of the growing importance of regional parties in Indian politics.

(b) Is there a justification for a bicameral legislature, when most of the state legislatures in India are unicameral ? Substantiate your answer taking Karnataka as a case in point.

**2.** Answer any ***three*** of the following questions. Restrict your answers to 100 – 125 words each : *10×3=30*

(a) Highlight the major inadequacies in the anti-defection law after the amendment of 2003.

(b) Examine the impact of dominant castes shaping mainstream politics in India.

(c) Are voting studies useful in the political sensitization of the electorate in India ?

(d) What are the legal devices available in India for the protection of the freedom of Press ?

(e) How useful is reservation for SCs and STs in legislatures in representing their special grievances and interests ? Comment.

**3.** Answer any ***four*** questions. Restrict your answers to 50 – 55 words each : *5×4=20*

(a) Give a brief account of the composition and functions of the National Commission for Religious and Linguistic Minorities.

(b) Outline the policy of the Government of India towards the physically challenged.

(c) Bring out the role of Kanshiram in Dalit awakening in India.

https://www.freshersnow.com/previous-year-question-papers/

## ಭಾಗ A

**1.** ಕೆಳಗಿನ ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. ನಿಮ್ಮ ಉತ್ತರ 200 – 250 ಪದಗಳಿಗೆ ಮೀರದಂತಿರಬೇಕು : *20×1=20*

(a) ಭಾರತದ ರಾಜಕೀಯದಲ್ಲಿ ಪ್ರಾದೇಶಿಕ ಪಕ್ಷಗಳ ಪ್ರಾಮುಖ್ಯತೆ ಹೆಚ್ಚಾಗುತ್ತಿರುವುದಕ್ಕೆ ಕಾರಣವೇನು ? ಚರ್ಚಿಸಿ.

(b) ಭಾರತದ ಬಹುತೇಕ ರಾಜ್ಯಗಳ ಶಾಸನಸಭೆಗಳು ಏಕಸದನಗಳನ್ನು ಹೊಂದಿರುವಾಗ ಎರಡು ಸದನಗಳ ಶಾಸನಸಭೆಗಳು ಸಮರ್ಥನೀಯವೆ ? ಇದಕ್ಕೆ ಕರ್ನಾಟಕವನ್ನು ಉದಾಹರಣೆಯಾಗಿಟ್ಟುಕೊಂಡು ಆಧಾರಪೂರ್ವಕವಾಗಿ ಉತ್ತರಿಸಿ.

**2.** ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 100 – 125 ಪದಗಳಿಗೆ ಮೀರದಂತಿರಬೇಕು : *10×3=30*

(a) 2003 ರ ತಿದ್ದುಪಡಿಯ ನಂತರ ಪಕ್ಷಾಂತರ ನಿಷೇಧ ಕಾನೂನಿನಲ್ಲಿ ಕಂಡುಬರುವ ಮುಖ್ಯ ನ್ಯೂನತೆಗಳೇನು ? ತಿಳಿಸಿ.

(b) ಭಾರತದ ಮುಖ್ಯವಾಹಿನಿ ರಾಜಕೀಯವನ್ನು ಪ್ರಭಾವ ಜಾತಿಗಳೇ ರೂಪಿಸುತ್ತಿರುವುದರ ಪರಿಣಾಮಗಳನ್ನು ವಿಶ್ಲೇಷಿಸಿ.

(c) ಭಾರತದ ಮತದಾರ ವರ್ಗದ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಮತದಾನ ಅಧ್ಯಯನಗಳು ಪ್ರಯೋಜನಕಾರಿಯಾಗಿವೆಯೆ ?

(d) ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕೆ ಸಂಬಂಧಿಸಿದಂತೆ ಭಾರತದಲ್ಲಿ ಲಭ್ಯವಿರುವ ಕಾನೂನು ಸಾಧನಗಳು ಯಾವುವು ?

(e) ಶಾಸನಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ನೀಡಲಾಗಿರುವ ಮೀಸಲಾತಿಯು ಅವರ ಸಂಕಷ್ಟಗಳು ಹಾಗೂ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಕ್ಕೆ ಎಷ್ಟರ ಮಟ್ಟಿಗೆ ಉಪಯುಕ್ತವಾಗಿದೆ ? ನಿಮ್ಮ ಅಭಿಪ್ರಾಯ ಬರೆಯಿರಿ.

**3.** ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 50 ರಿಂದ 55 ಪದಗಳಿಗೆ ಮೀರದಂತಿರಬೇಕು : *5×4=20*

(a) ಧಾರ್ಮಿಕ ಹಾಗೂ ಭಾಷಿಕ ಅಲ್ಪಸಂಖ್ಯಾತರಿಗಾಗಿ ರಚಿಸಲಾಗಿರುವ ರಾಷ್ಟ್ರೀಯ ಆಯೋಗದ ಸಂರಚನೆ ಹಾಗೂ ಕಾರ್ಯಗಳ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.

(b) ದೈಹಿಕ ವೈಕಲ್ಯ ಹೊಂದಿದವರ ಸಲುವಾಗಿ ಭಾರತ ಸರ್ಕಾರದ ನೀತಿಯೇನು ?

(c) ಭಾರತದ ದಲಿತರಲ್ಲಿ ಜಾಗೃತಿ ಮಾಡಿಸುವುದಕ್ಕೆ ಸಂಬಂಧಿಸಿದಂತೆ ಕಾನ್ಶಿರಾಮ್ ಅವರು ವಹಿಸಿದ ಪಾತ್ರವೇನು ?

[Turn over

https://www.freshersnow.com/previous-year-question-papers/

(d) Do smaller states perform better in India ? Answer, keeping Chattisgarh or Goa in view.

(e) "The media in India sensationalizes issues. It does not build public opinion." — Comment.

(f) Discuss the linguistic pluralism in Karnataka.

**4.** Write short notes on the following. Restrict your answers to 20 – 25 words each. *10×2=20*

(a) Kannada — a classical language

(b) Tawang Controversy

(c) Nanavati Commission

(d) Oversight Committee

(e) Inter-State Council

(f) National Highways Authority

(g) Nimrana Case

(h) 'Office of profit' and Elected representatives

(i) Bharatiya Kisan Union

(j) Research and Analysis Wing (RAW)

https://www.freshersnow.com/previous-year-question-papers/

(d) ಭಾರತದಲ್ಲಿ ಚಿಕ್ಕ ರಾಜ್ಯಗಳು ಉತ್ತಮವಾಗಿ ನಿರ್ವಹಿಸುತ್ತಿವೆಯೆ ? ಛತ್ತೀಸ್‌ಘಡ್ ಅಥವಾ ಗೋವಾ ರಾಜ್ಯವನ್ನು ಗಮನದಲ್ಲಿರಿಸಿಕೊಂಡು ಉತ್ತರ ಬರೆಯಿರಿ.

(e) "ಭಾರತದಲ್ಲಿ ಮಾಧ್ಯಮಗಳು ಭಾವೋದ್ರೇಕ ಉಂಟಾಗುವಂತೆ ವಿಷಯಗಳನ್ನು ನಿರೂಪಿಸುತ್ತವೆ. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಕೆಲಸ ಮಾಡುವುದಿಲ್ಲ." ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

(f) ಕರ್ನಾಟಕದಲ್ಲಿ ಬಹುಭಾಷೀಯತೆ ಕುರಿತು ಚರ್ಚಿಸಿ.

**4.** ಕೆಳಗಿನವುಗಳಿಗೆ ಕಿರುಟಿಪ್ಪಣಿ ಬರೆಯಿರಿ. ಪ್ರತಿಯೊಂದು ಉತ್ತರ 20 – 25 ಪದಗಳಿಗೆ ಮೀರದಂತಿರಬೇಕು : *10×2=20*

(a) ಕನ್ನಡ — ಒಂದು ಶಾಸ್ತ್ರೀಯ ಭಾಷೆ

(b) ತವಾಂಗ್ ವಿವಾದ

(c) ನಾನಾವತಿ ಆಯೋಗ

(d) ಓವರ್‌ಸೈಟ್ ಸಮಿತಿ (Oversight Committee)

(e) ಅಂತರರಾಜ್ಯ ಮಂಡಳಿ

(f) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

(g) ನಿಮ್ರಾನಾ ಪ್ರಕರಣ

(h) 'ಲಾಭದಾಯಕ ಹುದ್ದೆ' ಮತ್ತು ಚುನಾಯಿತ ಪ್ರತಿನಿಧಿಗಳು

(i) ಭಾರತೀಯ ಕಿಸಾನ್ ಒಕ್ಕೂಟ

(j) ಸಂಶೋಧನೆ ಮತ್ತು ವಿಶ್ಲೇಷಣಾ ವಿಭಾಗ (RAW)

[Turn over

https://www.freshersnow.com/previous-year-question-papers/

## PART B

**5.** Answer ***one*** of the following two questions. Restrict your answer to 200 words : *20×1=20*

(a) Explain the main objectives and structure of national economic reforms in India since 1991. Show whether or not the components of economic reforms are similar between the National and the State levels.

(b) Describe the major objectives and principles of World Trade Organization. Mention the main agreements of World Trade Organization.

**6.** Answer ***three*** of the following five questions. Restrict your answers to 100 words each : *10×3=30*

(a) List the major sources of revenue for the village panchayats in Karnataka. What have been the significant reforms in this regard ?

(b) Analyse the process of decentralized planning in Karnataka State.

(c) Who are targeted by the 'targeted' Public Distribution System ? Explain your answer with reference to Karnataka State.

(d) Explain the indicators in the construction of the National Human Development Index in India.

(e) What does "PURA" mean ? Answer, with special reference to the *Suvarna Gramodaya* initiative in Karnataka.

**7.** Answer any ***four*** of the following six questions in about 50 words each : *5×4=20*

(a) Mention the major items of agricultural and non-agricultural exports from Karnataka State.

(b) Distinguish the important strategies for reduction in the revenue deficit of the Government of Karnataka.

(c) Explain the major source of indirect taxes of the Government of India.

https://www.freshersnow.com/previous-year-question-papers/

## ಭಾಗ B

**5.** ಕೆಳಗಿನ ಯಾವುದಾದರೂ **ಒಂದು** ಪ್ರಶ್ನೆಗೆ 200 ಪದಗಳಿಗೆ ಮೀರದಂತೆ ಉತ್ತರಿಸಿ : *20×1=20*

(a) 1991 ರಿಂದೀಚೆಗೆ ಭಾರತದ ರಾಷ್ಟ್ರೀಯ ಆರ್ಥಿಕ ಸುಧಾರಣೆಗಳ ಪ್ರಮುಖ ಧ್ಯೇಯಗಳೇನು ಹಾಗೂ ಅದರ ರಚನೆ ಹೇಗಿದೆ ? ವಿವರಿಸಿ. ಆರ್ಥಿಕ ಸುಧಾರಣೆಗಳ ಅಂಶಗಳು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಒಂದೇ ರೀತಿಯಾಗಿವೆಯೆ ? ಅಥವಾ ಇಲ್ಲವೆ ? ಎಂಬುದನ್ನು ನಿರೂಪಿಸಿ.

(b) ವಿಶ್ವ ವ್ಯಾಪಾರ ಸಂಸ್ಥೆಯ ಪ್ರಮುಖ ಧ್ಯೇಯ ಹಾಗೂ ತತ್ವಗಳನ್ನು ವಿವರಿಸಿ. ವಿಶ್ವ ವ್ಯಾಪಾರ ಸಂಸ್ಥೆಯ ಪ್ರಮುಖ ಒಪ್ಪಂದಗಳು ಯಾವುವು ? ತಿಳಿಸಿ.

**6.** ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ತಲಾ 100 ಪದಗಳನ್ನು ಮೀರದಂತೆ ಉತ್ತರಿಸಿ : *10×3=30*

(a) ಕರ್ನಾಟಕದಲ್ಲಿ ಗ್ರಾಮ ಪಂಚಾಯತಿಗಳ ಮುಖ್ಯ ಆದಾಯ ಮೂಲಗಳು ಯಾವುವು ? ಈ ಸಂಬಂಧವಾಗಿ ಆಗಿರುವ ಮುಖ್ಯ ಸುಧಾರಣೆಗಳು ಯಾವುವು ?

(b) ಕರ್ನಾಟಕ ರಾಜ್ಯದ ಯೋಜನಾ ವಿಕೇಂದ್ರೀಕರಣದ ಪ್ರಕ್ರಿಯೆಯನ್ನು ವಿಶ್ಲೇಷಿಸಿ.

(c) 'ನಿರ್ದಿಷ್ಟ ಗುರಿ' ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಯಾರನ್ನು ಗುರಿಯಾಗಿಟ್ಟಕೊಳ್ಳಲಾಗಿದೆ ? ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ನಿಮ್ಮ ಉತ್ತರವನ್ನು ಬರೆಯಿರಿ.

(d) ಭಾರತದಲ್ಲಿ ರಾಷ್ಟ್ರೀಯ ಮಾನವ ಅಭಿವೃದ್ಧಿ ಸೂಚಿಯ ರಚನೆಯಲ್ಲಿನ ಸೂಚಕಗಳನ್ನು ವಿವರಿಸಿ.

(e) "PURA" ಎಂದರೇನು ? ಕರ್ನಾಟಕದಲ್ಲಿ ಕೈಗೊಂಡಿರುವ *ಸುವರ್ಣ ಗ್ರಾಮೋದಯವನ್ನು* ವಿಶೇಷ ಗಮನದಲ್ಲಿಟ್ಟುಕೊಂಡು ಉತ್ತರಿಸಿ.

**7.** ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಉತ್ತರಗಳು ತಲಾ 50 ಪದಗಳ ಮಿತಿಯಲ್ಲಿರಬೇಕು : *5×4=20*

(a) ಕರ್ನಾಟಕ ರಾಜ್ಯದಿಂದ ಆಗುವ ರಫ್ತುಗಳಲ್ಲಿರುವ ಪ್ರಮುಖ ಕೃಷಿ ಉತ್ಪನ್ನಗಳು ಹಾಗೂ ಕೃಷಿಯೇತರ ಉತ್ಪನ್ನಗಳು ಯಾವುವು ?

(b) ಕರ್ನಾಟಕ ಸರ್ಕಾರದ ರೆವಿನ್ಯೂ ಕೊರತೆಯನ್ನು ತಗ್ಗಿಸುವುದಕ್ಕೆ ಕೈಗೊಂಡಿರುವ ಪ್ರಮುಖ ತಂತ್ರೋಪಾಯಗಳನ್ನು ತಿಳಿಸಿ.

(c) ಭಾರತ ಸರ್ಕಾರದ ಪರೋಕ್ಷ ತೆರಿಗೆಗಳ ಪ್ರಮುಖ ಮೂಲಗಳನ್ನು ವಿವರಿಸಿ.

[Turn over

https://www.freshersnow.com/previous-year-question-papers/

(d) Highlight the major targets and objectives of Karnataka's New Industrial Policy 2006 – 2011.

(e) Explain the major justifications for establishing Special Economic Zones (SEZ) in India.

(f) What are the monitorable indicators for education and literacy in India's Tenth Five Year Plan ?

**8.** Write a brief note on each of the following in about 20 words each : *2×10=20*

(a) Karnataka Electricity Regulatory Commission

(b) Central Statistical Organization

(c) National Sample Survey Organization

(d) Karnataka Udyog Mitra

(e) Securities Exchange Board of India

(f) Bilateral Exchange Rate

(g) Prime Lending Rate

(h) Priority Sectors in Banking

(i) Net National Product

(j) Tele-density

https://www.freshersnow.com/previous-year-question-papers/

(d) ಕರ್ನಾಟಕದ ಹೊಸ ಕೈಗಾರಿಕಾ ನೀತಿ 2006 – 2011 ರ ಪ್ರಮುಖ ಗುರಿಗಳು ಮತ್ತು ಧ್ಯೇಯೋದ್ದೇಶಗಳನ್ನು ತಿಳಿಸಿ.

(e) ಭಾರತದಲ್ಲಿ ವಿಶೇಷ ಆರ್ಥಿಕ ವಲಯ (SEZ) ಗಳನ್ನು ಸ್ಥಾಪಿಸುವುದಕ್ಕೆ ನೀಡಲಾದ ಮುಖ್ಯ ಸಮರ್ಥನೆಗಳೇನು ? ವಿವರಿಸಿ.

(f) ಭಾರತದ ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣ ಮತ್ತು ಸಾಕ್ಷರತೆಗೆ ಸಂಬಂಧಿಸಿದಂತೆ ನಿಗಾ ಇಡಲು ಸಾಧ್ಯವಾದ (Monitorable) ಸೂಚಕಗಳು ಯಾವುವು ?

**8.** ಈ ಕೆಳಗಿನವುಗಳಿಗೆ ಕಿರುಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 20 ಪದಗಳಿಗೆ ಮೀರದಂತಿರಬೇಕು : *2×10=20*

(a) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ

(b) ಕೇಂದ್ರ ಸಾಂಖ್ಯಿಕ ಸಂಸ್ಥೆ

(c) ರಾಷ್ಟ್ರೀಯ ಮಾದರಿ ಸರ್ವೇಕ್ಷಣಾ ಸಂಸ್ಥೆ

(d) ಕರ್ನಾಟಕ ಉದ್ಯೋಗ ಮಿತ್ರ

(e) ಭಾರತದ ಸೆಕ್ಯೂರಿಟಿಗಳ ವಿನಿಮಯ ಮಂಡಳಿ

(f) ದ್ವಿಪಕ್ಷೀಯ ವಿನಿಮಯ ದರ

(g) ಮೂಲ ಠೇವಣಿ ದರ

(h) ಬ್ಯಾಂಕಿಂಗ್‌ನಲ್ಲಿ ಆದ್ಯತಾ ವಲಯಗಳು

(i) ನಿವ್ವಳ ರಾಷ್ಟ್ರೀಯ ಉತ್ಪನ್ನ

(j) ಟೆಲಿಡೆನ್ಸಿಟಿ

[Turn over

https://www.freshersnow.com/previous-year-question-papers/

## PART C

**9.** Answer any ***one*** question. Restrict your answer to 200 – 250 words. *20×1=20*

(a) Discuss the salient features of Deccan Trap.

(b) Critically examine the Hydel power resources of Karnataka.

**10.** Answer any ***one*** question. Restrict your answer to 100 – 150 words. *10×1=10*

(a) Bring out the salient features of the Cauvery river system.

(b) Elucidate the geographical factors responsible for variation in population density in Karnataka.

**11.** Answer any ***two*** questions. Restrict your answers to 50 words each. *5×2=10*

(a) Highlight the geographical factors responsible for Dairy development in India.

(b) List the uses of Meteorological satellites.

(c) Give an account of Manganese production in Karnataka.

https://www.freshersnow.com/previous-year-question-papers/

## ಭಾಗ C

**9.** ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. ನಿಮ್ಮ ಉತ್ತರ 200 – 250 ಪದಗಳಿಗೆ ಮೀರದಂತಿರಬೇಕು.

*20×1=20*

(a) ಡೆಕನ್ ಟ್ರ್ಯಾಪ್‌ನ ವಿಶಿಷ್ಟ ಲಕ್ಷಣಗಳ ಬಗ್ಗೆ ಚರ್ಚಿಸಿ.

(b) ಕರ್ನಾಟಕದ ಜಲವಿದ್ಯುತ್ ಸಂಪನ್ಮೂಲಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

**10.** ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. ನಿಮ್ಮ ಉತ್ತರ 100 – 150 ಪದಗಳಿಗೆ ಮೀರದಂತಿರಬೇಕು.

*10×1=10*

(a) ಕಾವೇರಿ ನದಿ ವ್ಯವಸ್ಥೆಯ ವಿಶಿಷ್ಟ ಸ್ವರೂಪವನ್ನು ಪರಿಚಯಿಸಿ.

(b) ಕರ್ನಾಟಕದ ಜನಸಂಖ್ಯಾ ಸಾಂದ್ರತೆಯಲ್ಲಿ ಕಂಡುಬರುವ ವೈವಿಧ್ಯಕ್ಕೆ ಕಾರಣವಾದ ಭೌಗೋಳಿಕ ಅಂಶಗಳು ಯಾವುವು ?

**11.** ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಉತ್ತರ ತಲಾ 50 ಪದಗಳಿಗೆ ಮೀರದಂತಿರಬೇಕು.

*5×2=10*

(a) ಭಾರತದ ಹೈನುಗಾರಿಕೆ ಅಭಿವೃದ್ಧಿಗೆ ಕಾರಣವಾದ ಭೌಗೋಳಿಕ ಅಂಶಗಳ ಮುಖ್ಯಾಂಶಗಳನ್ನು ತಿಳಿಸಿ.

(b) ಪವನ ವಿಜ್ಞಾನಕ್ಕೆ (Meteorological) ಸಂಬಂಧಿಸಿದಂತೆ ಉಪಗ್ರಹಗಳ ಪ್ರಯೋಜನಗಳನ್ನು ಪಟ್ಟಿಮಾಡಿ.

(c) ಕರ್ನಾಟಕದ ಮ್ಯಾಂಗನೀಸ್ ಉತ್ಪಾದನೆ ಕುರಿತು ಟಿಪ್ಪಣಿ ಬರೆಯಿರಿ.

[Turn over

https://www.freshersnow.com/previous-year-question-papers/

## PART D

**12.** Answer any ***one*** of the following questions. Restrict your answer to 200 – 250 words : *20×1=20*

(a) Climate change is becoming the single largest threat to the world. How does this affect India ?

(b) What is 'Organic Farming' ? How is it expected to solve the problems/ill-effects of modern agriculture ?

**13.** Write brief notes on any ***four*** of the following. Restrict your answers to 100 – 120 words each. *10×4=40*

(a) Acid Rain

(b) Ecological footprint

(c) Municipal Solid Wastes (MSW) and Supreme Court guidelines

(d) Jaipur foot

(e) WINDOWS VISTA

(f) Global Positioning Systems

**14.** Write short notes on ***all*** of the following. Restrict your answers to 20 – 25 words each. *10×2=20*

(a) Tele-medicine

(b) Mobile computing

(c) Bt Cotton

(d) MP4

(e) MEMs

(f) Biomethanation

(g) Amorphous Silicon

(h) LED

(i) Salinization

(j) Chikungunya

https://www.freshersnow.com/previous-year-question-papers/

## ಭಾಗ D

**12.** ಕೆಳಗಿನ ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ ನಿಮ್ಮ ಉತ್ತರ 200 ರಿಂದ 250 ಪದಗಳ ಮಿತಿಯಲ್ಲಿರಬೇಕು : *20×1=20*

(a) ವಾತಾವರಣದಲ್ಲಿ ನಡೆಯುತ್ತಿರುವ ಬದಲಾವಣೆಯು ಜಗತ್ತಿಗೆ ಬಹುದೊಡ್ಡ ಅಪಾಯ ಒಡ್ಡುತ್ತಿರುವ ಏಕೈಕ ಸಂಗತಿಯಾಗುತ್ತಿದೆ. ಇದು ಭಾರತದ ಮೇಲೆ ಹೇಗೆ ಪರಿಣಾಮ ಉಂಟುಮಾಡಿದೆ ?

(b) 'ಸಾವಯವ ಕೃಷಿ' ಎಂದರೇನು ? ಆಧುನಿಕ ಕೃಷಿ ಪದ್ಧತಿಯ ಸಮಸ್ಯೆಗಳು/ ಕೆಟ್ಟಪರಿಣಾಮಗಳನ್ನು ಇದು ಹೇಗೆ ನಿವಾರಿಸಬಲ್ಲದು ?

**13.** ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 100 ರಿಂದ 120 ಪದಗಳ ಮಿತಿಯಲ್ಲಿರಬೇಕು. *10×4=40*

(a) ಆಮ್ಲ ಮಳೆ

(b) ಪರಿಸರಾತ್ಮಕ ಹೆಜ್ಜೆಗುರುತು

(c) ಪುರಸಭೆಯ ಘನತ್ಯಾಜ್ಯಗಳು (MSW) ಮತ್ತು ಸರ್ವೋಚ್ಚ ನ್ಯಾಯಾಲಯದ ಮಾರ್ಗದರ್ಶಿ ಸೂತ್ರಗಳು

(d) ಜೈಪುರ್ ಕಾಲು

(e) WINDOWS VISTA

(f) ಜಾಗತಿಕ ಸ್ಥಾನೀಕರಣ ವ್ಯವಸ್ಥೆಗಳು

**14.** ಕೆಳಗಿನ **ಎಲ್ಲವುಗಳಿಗೂ** ಕಿರುಟಿಪ್ಪಣಿ ಬರೆಯಿರಿ. ಪ್ರತಿಯೋಂದು ಉತ್ತರವೂ 20 ರಿಂದ 25 ಪದಗಳ ಮಿತಿಯಲ್ಲಿರಬೇಕು. *10×2=20*

(a) ಟೆಲಿಮೆಡಿಸಿನ್

(b) ಮೊಬೈಲ್ ಕಂಪ್ಯೂಟಿಂಗ್

(c) ಬಿಟಿ ಹತ್ತಿ

(d) MP4

(e) MEM ಗಳು

(f) ಬಯೋಮೆಥನೇಷನ್

(g) ಅಸ್ಫಟಿಕ ಸಿಲಿಕಾನ್

(h) LED

(i) ಲವಣೀಕರಣ

(j) ಚಿಕುನ್‌ಗುನ್ಯಾ

https://www.freshersnow.com/previous-year-question-papers/